

ದ್ವೀಪಗಳ ಸಂರಕ್ಷಣೆಗಾಗಿ 'ಗೇಬಿಯಲ್ ಸ್ಟ್ರಕ್ಚರ್' ಮಾದರಿಯ ತಡೆಗೋಡೆ ನಿರ್ಮಿಸಲು ಜಾಲರಿ ಅಳವಡಿಸುತ್ತಿರುವ ಕಾರ್ಮಿಕರು

## ಸಲೀಂ ಅಲಿ ಮಾಹಿತಿ ಕೇಂದ್ರ

ಪ್ರಖ್ಯಾತ ಪಕ್ಷಿಶಾಸ್ತ್ರಜ್ಞ (ಭಾರತದ ಬರ್ಡ್‌ಮ್ಯಾನ್) ಡಾ. ಸಲೀಂ ಅಲಿ ಅವರು 1939–40ರಲ್ಲಿ ಮೈಸೂರು ಭಾಗಕ್ಕೆ ಪಕ್ಷಿಗಳ ಅಧ್ಯಯನಕ್ಕೆ ಬಂದಿದ್ದರು. ರಂಗನತಿಟ್ಟಿನ ಸ್ಥಳ ಗುರುತಿಸಿ ಮೈಸೂರು ಮಹಾರಾಜರಿಗೆ ಮನವಿ ಸಲ್ಲಿಸಿ, 'ಪಕ್ಷಿಧಾಮ' ಎಂದು ಘೋಷಣೆ ಮಾಡುವಲ್ಲಿ ಯಶಸ್ವಿಯಾದರು. 1998ರಲ್ಲಿ ಮರು ಘೋಷಿಸಲ್ಪಟ್ಟು 'ರಂಗನತಿಟ್ಟು ಪಕ್ಷಿಧಾಮ' ಎಂದು ನಾಮಕರಣ ಮಾಡಲಾಯಿತು.

ಸಲೀಂ ಅಲಿ ನೆನಪಿಗಾಗಿ ಮತ್ತು ಪಕ್ಷಿಗಳ ಕುರಿತ ಮಾಹಿತಿಗಾಗಿ 2015ರಲ್ಲಿ 'ಡಾ. ಸಲೀಂ ಅಲಿ ಮಾಹಿತಿ ಕೇಂದ್ರ'ವನ್ನು ರಂಗನತಿಟ್ಟಿನಲ್ಲಿ ತೆರೆಯಲಾಯಿತು. ಪಕ್ಷಿ ವೀಕ್ಷಕರಿಗೆ ಮತ್ತು ಪ್ರವಾಸಿಗರಿಗೆ ರಂಗನತಿಟ್ಟಿನ ವಿವಿಧ ಪಕ್ಷಿ ಪ್ರಭೇದಗಳು, ಅವುಗಳ ವಲಸೆ ಮತ್ತು ಪಕ್ಷಿಧಾಮದ ಇತಿಹಾಸದ ಬಗ್ಗೆ ಇಲ್ಲಿ ಮಾಹಿತಿ ಲಭ್ಯವಿದೆ.

ಕೊಕ್ಕು ಮತ್ತು ಪಾದಗಳ ರಚನೆ ಮತ್ತು ಪಕ್ಷಿಗಳ ಪ್ರತಿಕೃತಿಗಳು, ಡಿಜಿಟಲ್ ಫಲಕಗಳು, ಪಕ್ಷಿನೋಟವನ್ನು ಕಟ್ಟಿಕೊಡುತ್ತವೆ. ಹಕ್ಕಿಗಳ ಚಿತ್ರದ ಮೇಲಿನ ಬಟನ್ ಒತ್ತಿದರೆ, ಹೊರಬರುವ ಇಂಚರ ಮಕ್ಕಳನ್ನು ಸಂತಸದ ಅಲೆಯಲ್ಲಿ ತೇಲಿಸುತ್ತದೆ.



ಕಾವೇರಿ ನದಿಯಲ್ಲಿ ಬಿಳಿ ಐಬಿಸ್‌ಗಳ (ಬಿಳಿ ಕೆಂಬರಲು) ಜಲಕ್ರೀಡೆ

ಪಕ್ಷಿಗಳು ದೂರದ ಪ್ರದೇಶಗಳಿಂದ ಇಲ್ಲಿಗೆ ವಲಸೆ ಬರುತ್ತವೆ. ಜೂನ್‌ವರೆಗೆ ಇದ್ದು, ಗೂಡು ಕಟ್ಟಿ, ಮೊಟ್ಟೆ ಇಟ್ಟು, ಮರಿ ಮಾಡುತ್ತವೆ. ಆಹಾರದ ಅನ್ವೇಷಣೆ ಮತ್ತು ಹಾರಲು ಕಲಿಸಿದ ನಂತರ ರೆಕ್ಕೆ ಬಲಿತ ಮರಿಗಳೊಂದಿಗೆ ಸ್ವಸ್ಥಾನಕ್ಕೆ ಪಕ್ಷಿಗಳು ಹಾರಿ ಹೋಗುತ್ತವೆ. ಹೀಗಾಗಿಯೇ ರಂಗನತಿಟ್ಟನ್ನು 'ಪಕ್ಷಿಗಳ ಪ್ರಸೂತಿ ಗೃಹ' ಎಂದು ಕರೆಯಲಾಗುತ್ತದೆ.

ಇಲ್ಲಿನ ದ್ವೀಪಗಳು ಮಂಗ, ಮುಂಗುಸಿ, ನೀರುನಾಯಿ, ಮರಬೆಕ್ಕು, ಉಡ, ಸರೀಸೃಪ ಹಾಗೂ ಪಕ್ಷಿಗಳಂತೆ ಹಾರುವ ಸಾಮರ್ಥ್ಯ ಹೊಂದಿರುವ ಜಗತ್ತಿನ ಏಕೈಕ ಸಸ್ತನಿ ಪ್ರಾಣಿ ಬಾವಲಿಗಳಿಗೂ ಆವಾಸಸ್ಥಾನವಾಗಿವೆ. ಸಿಹಿ ನೀರಿನ ಮೊಸಳೆಗಳು, ಪಟ್ಟೆ ಕತ್ತಿನ ಕವಲುತೋಕೆ ಪಕ್ಷಿಗಳು ಇಲ್ಲಿನ ಮತ್ತೊಂದು ಆಕರ್ಷಣೆ.

### ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ರಂಗನತಿಟ್ಟು ಪಕ್ಷಿಧಾಮದ ವೀಕ್ಷಕರಿಗೆ ಉಲ್ಲಾಸ ತರುವ ಹಾಗೂ ಸುಂದರ ಸಂಗತಿಯೆಂದರೆ ಈ ನದಿರೀವ ಅಥವಾ ನದಿ ಮೀನುಗುಟುಕ. ಕಲ್ಲು ಬಂಡೆಗಳ ಮೇಲೆ ವಿಶ್ರಮಿಸುವ ಈ ಪಕ್ಷಿಯು ಹೊಳೆಯುವ ಕಪ್ಪು ತಲೆ, ಭಿನ್ನವಾಗಿ ಕಾಣುವ ಕಿತ್ತಳೆ ಬಣ್ಣದ ಕೊಕ್ಕು, ಮೆಹೆಂದಿ ಬಳಿದಂತೆ ಕಾಣುವ ಕಾಲುಗಳು, ಕವಲೊಡೆದ ಬಾಲ, ಚೂಪಾದ ರೆಕ್ಕೆಗಳನ್ನು ಹೊಂದಿರುತ್ತವೆ. ಸಿಹಿ ನೀರಿನಲ್ಲಿ ಹೆಚ್ಚಾಗಿ ಕಂಡುಬರುವ ನದಿರೀವಗಳು ಮೀನು ಹಿಡಿಯುವುದರಲ್ಲಿ ಎತ್ತಿದ ಕೈ. ನೀರಿನೊಳಗೆ ಧುಮುಕಿ ಶಿಕಾರಿಯಾಡುತ್ತವೆ.

### ದೋಣಿ ವಿಹಾರದ ಸಂಭ್ರಮ

'ದೋಣಿ ವಿಹಾರ' ರಂಗನತಿಟ್ಟಿನ ಪ್ರಮುಖ ಆಕರ್ಷಣೆ. ವಿಶಾಲವಾಗಿ ಹರಿಯುವ ಕಾವೇರಿ ನದಿಯಲ್ಲಿ ಹಚ್ಚ ಹಸುರಿನ ನಿಸರ್ಗದ ಮಧ್ಯೆ ದೋಣಿಯಲ್ಲಿ ವಿಹರಿಸುತ್ತಾ ರೆಂಬೆ ಕೊಂಬೆಗಳ ಮೇಲೆ ಗೂಡು ಕಟ್ಟಿರುವ ಪಕ್ಷಿಗಳನ್ನು ಹತ್ತಿರದಿಂದ ಕಣ್ತುಂಬಿಕೊಳ್ಳುವುದೇ ಒಂದು ಸಂಭ್ರಮ. ನೀರುನಾಯಿ ಮತ್ತು ಸಿಹಿ ನೀರಿನ ಮೊಸಳೆಗಳನ್ನು ನೋಡುವ ಅನುಭವ ರೋಮಾಂಚಕ. ಮರದಲ್ಲಿ